**ಅಸಲು ದಾವ ಸಂಖ್ಯೆಃ 452/2023**

**ಪಿ.ಡಬ್ಲೂ -1**

**ದಿಃ02-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಎಸ್.ಎಸ್, ರವರಿಂದಃ-**

ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮರಾಠಿ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಪೂರ್ಣಗೊಳಿಸಿರುತ್ತೇನೆ. ನನಗೆ ಆಂಗ್ಲ ಭಾಷೆ ಸ್ವಲ್ಪ ಮಟ್ಟಿಗೆ ಓದಲು ಬರೆಯಲು ಬರುತ್ತದೆ. ನಾನು ಸಲ್ಲಿಸಿರುವ ವಾದ ಪತ್ರ ಆಂಗ್ಲ ಭಾಷೆಯಲ್ಲಿದ್ದು ಅದರಲ್ಲಿ ಬರೆದಿರುವ ಅಂಶಗಳು ನನಗೆ ತಿಳಿದಿರುತ್ತವೆ. ಪ್ರತಿವಾದಿ ನನಗೆ ಸಂಬಂಧಿಯಾಗಬೇಕು ಎಂದರೆ ಸಾಕ್ಷಿಯು ಕೇವಲ ಅಡ್ಡಹೆಸರು ಬಹುಬಂದರಂತಾಗಿರುತ್ತವೆ ಎಂದು ನುಡಿಯುತ್ತಾರೆ. ಪ್ರತಿವಾದಿ ನನಗೆ ಕುಟುಂಬದ ಸಂಬಂಧಿಯಾಗಿರುವುದಿಲ್ಲ. ಈ ದಾವೆಯನ್ನು ನಾನು ಒಂದು ಗೋಡೆಯ ಸಲುವಾಗಿ ಹೂಡಿರುತ್ತೇನೆ. ನಾನು ಈ ದಾವೆಯನ್ನು ಸ್ವತ್ತಿನಲ್ಲಿ ಹಿಸ್ಸೆ ಕೋರಿ ಹೂಡಿರುವುದಿಲ್ಲ ಎಂದರೆ ಸರಿ. ನಾನು ವಾದ ಪತ್ರದಲ್ಲಿ ನಮೂದಿಸಿರುವ ಮನೆಯು ನಮ್ಮ ತಂದೆ ಕಟ್ಟಿದ ಮನೆ ಆಗಿರುತ್ತದೆ ಎಂದರೆ ಸರಿ. ಯಾವ ಇಸ್ವಿಯಲ್ಲಿ ಮನೆ ನಿರ್ಮಿಸಲಾಗಿತ್ತು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ 1979 ನೇ ಇಸ್ವಿಯಲ್ಲಿ ಮರಣ ಹೊಂದಿರುತ್ತಾರೆ. ಆ ಸಮಯದಲ್ಲಿ ನನಗೆ 6 ವರ್ಷ ವಯಸ್ಸಾಗಿತ್ತು. ಈ ದಾವೆಯನ್ನು ನನ್ನ ತಾಯಿ ಹೂಡಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಈಗ 85 ವರ್ಷ ವಯಸ್ಸಾಗಿರುತ್ತದೆ. ನನ್ನ ತಾಯಿ ಆರೋಗ್ಯವಂತರಾಗಿದ್ದು, ಅವರಿಗೆ ಚೆನ್ನಾಗಿ ಕೇಳಿಸುತ್ತದೆ ಎಂದರೆ ಸಾಕ್ಷಿಯು ಸ್ವಲ್ಪ ಸ್ವಲ್ಪ ಕಿವಿ ಕೇಳಿಸುತ್ತದೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಎಲ್ಲ ತಿಳಿದರೂ ಸಹ ಹಾಗೂ ಆಕೆಗೆ ಕಿವಿ ಚೆನ್ನಾಗಿ ಕೇಳಿಸಿದರೂ ಸಹ ನಾನು ಜಿಪಿಎ ಪಡೆದು ಸಾಕ್ಷ್ಯ ನುಡಿಯಲು ಬಂದಿರುತ್ತದೆ ಎಂದರೆ ಸರಿಯಿಲ್ಲ. ವಾದ ಪತ್ರದ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ನನ್ನ ತಾಯಿಯ ವಯಸ್ಸು 65 ಎಂದು ತೋರಿಸಲಾಗಿದೆ ಎಂದರೆ ಸರಿ. ನನ್ನ

ತಾಯಿ 3ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ವಾದ ಪತ್ರದಲ್ಲಿ ನನ್ನ ತಾಯಿ ಹೆಬ್ಬೆಟ್ಟಿನ ಗುರುತನ್ನು ಸಹಿ ಬದಲಾಗಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಾಯಿಗೆ ಸರಿಯಾಗಿ ಕಣ್ಣು ಕಾಣಿಸದ ಕಾರಣ ಹಾಗೂ ಆಕೆಯ ಕೈ ನಡುಗುತ್ತಿರುವ ಕಾರಣ ಆಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿಗೆ ಕಣ್ಣು ಕಾಣಿಸುವುದಿಲ್ಲ ಎಂದು ನಾನು ಹೇಳಿದ ಕಾರಣ ಅವರು ವಾದ ಪತ್ರವನ್ನು ನೋಡದೇ ಹಾಗೆಯೇ ತನ್ನ ಹೆಬ್ಬೆಟ್ಟಿನ ಗುರುತನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಪತ್ರದಲ್ಲಿ ಹೇಳಿರುವ ಅಂಶಗಳು ನನ್ನ ತಾಯಿಗೆ ತಿಳಿದಿರುವುದಿಲ್ಲ ಕೇವಲ ತನ್ನ ಹೆಬ್ಬೆಟ್ಟಿನ ಗುರುತನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಪತ್ರದಲ್ಲಿ ಬರೆದಿರುವುದನ್ನು ತಿಳಿದುಕೊಂಡು ತನ್ನ ತಾಯಿ ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ನಮ್ಮ ಮನೆಯಲ್ಲಿ ನಾನು, ನನ್ನ ಸಹೋದರ, ನನ್ನ ಸಹೋದರನ ಹೆಂಡತಿ, ನನ್ನ ಹೆಂಡತಿ, ನನ್ನ ತಾಯಿ ಮತ್ತು ನನ್ನ ಹಾಗೂ ನನ್ನಸಹೋದರನ ಮಕ್ಕಳು ವಾಸ ಮಾಡುತ್ತೇವೆ. ಈ ದಾವೆಯನ್ನು ಹೂಡುವ ಸಮಯದಲ್ಲಿ ನಾನೇ ದಾವೆ ಹೂಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಸದರಿ ದಾವಾ ಸ್ವತ್ತು ತನ್ನ ತಾಯಿಯ ಹೆಸರನಲ್ಲಿ ಇದ್ದ ಕಾರಣ ದಾವೆಯನ್ನು ತನ್ನ ತಾಯಿ ಹೂಡಿರುವುದಾಗಿ ನುಡಿಯುತ್ತಾರೆ. ನನ್ನ ಮನೆಯ ವಿಸ್ತೀರ್ಣ 24 ಅಡಿ ಅಗಲ ಹಾಗೂ 150 ಅಡಿ ಉದ್ದ ಇರುತ್ತದೆ. ನಮ್ಮ ಮನೆಯು ಪೂರ್ವ ಪಶ್ಚಿಮವಾಗಿ ಎಲ್ಲಿಂದ ಪ್ರಾರಂಭವಾಗುತ್ತದೆ ಎಂದು ತೊರಿಸಲು ನಾನು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ತಾನು ಉತಾರ ಹಾಜರು ಪಡಿಸಿರುವುದಾಗಿ ನುಡಿಯುತ್ತಾರೆ. ನನ್ನ ಮನೆಯ ಸ್ವತ್ತು ಅನ್ಯಸಂಕ್ರಮಣ ಸ್ವತ್ತಾಗಿರುವುದಿಲ್ಲ ಎಂದರೆ ಸರಿ. ಅದು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಗ್ರಾಮ ಪಂಚಾಯಿತಿಯಲ್ಲಿ ನನ್ನ ಸ್ವತ್ತಿನ ಅಳತೆ ಕಾರ್ಯ ಎಲ್ಲಿಂದ ಎಲ್ಲಿಯವರೆಗೆ ಇರುತ್ತದೆ ಎಂದು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಈಗ ನಿಪಿ:14 ರ ಛಾಯಾಚಿತ್ರವನ್ನು ನೋಡುತ್ತಿದ್ದು, ಅದರಲ್ಲಿ ಕಾಣುತ್ತಿರುವ ಮನೆ ನನ್ನದು ಹಾಗೂ ಸದರಿ ಮನೆಯ ಬಲಭಾಗಕ್ಕೆ ಇರುವ ಮನೆಯು ನನ್ನ ಮನೆಗಿಂತ ಎತ್ತರಕ್ಕೆ ಕಟ್ಟಲಾಗಿದೆ ಎಂದರೆ ಸರಿ. ನಿಪಿ:14 ರಲ್ಲಿ ಕಾಣುತ್ತಿರುವ ಮನೆಯ ಗೋಡೆಯು 60 ಅಡಿ ಉದ್ದ ಇರುತ್ತದೆ. ಪ್ರತಿವಾದಿಯು ಸದರಿ ಗೋಡೆಯ ಪಕ್ಕದಲ್ಲಿರುವ ಮನೆಯಲ್ಲಿ ಕೇವಲ ಮುಂಭಾಗದ 20 ಅಡಿ ಜಾಗದಲ್ಲಿ ವಾಸ ಮಾಡುತ್ತಾರೆ. ಹಿಂಭಾಗದ ಜಾಗದಲ್ಲಿ ಪ್ರತಿವಾದಿಯ ಸಹೋದರರು ಇರುತ್ತಾರೆ ಎಂದರೆ ಸರಿ. ವಿವಾದಿತ ಗೋಡೆಯ ಹಿಂಭಾಗದಲ್ಲಿ ವಾಸ ಮಾಡುತ್ತಿರುವ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿಯವರು ನನ್ನ ದಾವಾ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯ ಹಾಗೂ ಆತನ ಸಹೋದರರ ನಡುವೆ ಅವರ ಸ್ವತ್ತಿನಲ್ಲಿ ಪರಸ್ಪರ ವಿಭಾಗವಾಗಿರುತ್ತದೆ. ಸದರಿ ವಿಭಾಗದ ಕುರಿತು ನಾನು ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ವಿವಾದದ ಕುರಿತು ನಾನು ಕಾಕತಿ ಪೋಲೀಸ ಠಾಣೆಯಲ್ಲಿ ದೂರು ದಾಖಲಿಸಲು ಹೋಗಿದ್ದೆ. ದಿ:28.03.2023 ರಂದು ನಾನು ಪೋಲೀಸ ಠಾಣೆಗೆ ಹೋಗಿದ್ದೆ. ಸದರಿ ದೂರನ್ನು ಪೋಲೀಸರು ಅದು ಸಿವಿಲ್ ಸ್ವರೂಪದ್ದು ಆಗಿರುತ್ತದೆ ಎಂಬ ಕಾರಣಕ್ಕೆ ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಒಂದು ಮಧ್ಯಂತರ ಆದೇಶವಾಗಿ ಪ್ರತಿವಾದಿ ತನ್ನ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಬಹುದು ಎಂದು ನಿರ್ಣಯವಾಗಿರುತ್ತದೆ ಎಂದರೆ ಸರಿ. ನಾನು ಠಾಣೆಗೆ ಹೋದ ಸಮಯದಲ್ಲಿ ಪ್ರತಿವಾದಿ ಸಹ ದೂರು ದಾಖಲಿಸಲು ಪೋಲೀಸ ಠಾಣೆಗೆ ಬಂದಿದ್ದು ಅವರ ದೂರನ್ನು ಸಹ ಪೋಲೀಸರು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿ.

2) ಈಗ ನಾನು ಒಂದು ಛಾಯಾಚಿತ್ರವನ್ನು ನೋಡುತ್ತಿದ್ದು, ಅದರಲ್ಲಿ ಕಾಣುತ್ತಿರುವ ಗೋಡೆ

ನಮ್ಮ ಮನೆಯ ಗೋಡೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಅದನ್ನು ಗುರುತಿಸಿದ ಕಾರಣ ಅದನ್ನು ನಿಡಿಃ1 ಎಂದು ಗುರುತಿಸಲಾಯಿತು. ಈಗ ನಾನು ನಿಪಿಃ13 ರ ಛಾಯಾಚಿತ್ರ ನೋಡುತ್ತಿದ್ದು, ಅದರಲ್ಲಿ ಮೊದಲು ಕಾಣುತ್ತಿರುವ ಬಾಗಿಲಿನ ಚೌಕಟ್ಟು ಪ್ರತಿವಾದಿಗೆ ಸೇರಿದ್ದು ಎಂದರೆ ಸರಿ. ಪ್ರತಿವಾದಿಯ ಮನೆಯು ಮಳೆಯಿಂದಾಗಿ ಬಿದ್ದಿರುತ್ತದೆ ಎಂದರೆ ಸರಿಯಲ್ಲ. ನಾನು ಈಗ ಒಂದು ಛಾಯಾಚಿತ್ರ ನೋಡುತ್ತಿದ್ದು ಅದರಲ್ಲಿ ಬಟ್ಟೆಗಳನ್ನು ಒಣಗಿಸಿರುವ ಜಾಗವು ಪ್ರತಿವಾದಿಗೆ ಸೇರಿದ ಜಾಗ ಎಂದರೆ ಸರಿ. ಸಾಕ್ಷಿಯು ಅದನ್ನು ಒಪ್ಪಿ ದ ಕಾರಣ ಅದನ್ನು ನಿಡಿಃ2 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**